**ದಿನಾಂಕ 14.09.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಜಿ.ಎಸ್.ಎಸ್. ವಕೀಲರಿಂದಃ**

1. ನಾನು ಬಿ.ಎಸ್.ಸಿ.(ಅಗ್ರಿ), ಎಲ್.ಎಲ್.ಬಿ, ವ್ಯಾಸಾಂಗ ಮಾಡಿದ್ದೇನೆ. 1976 ರಲ್ಲಿ ನಾನು ಬಿ.ಎಸ್.ಸಿ.(ಅಗ್ರಿ) ವ್ಯಾಸಾಂಗ ಮಾಡಿದ್ದೇನೆ. ನಾನು ರೇಣುಕಾಚಾರ್ಯ ಕಾಲೇಜಿನಲ್ಲಿ 1977-1983 ರವರೆಗೂ ಎಲ್.ಎಲ್.ಬಿ. ವ್ಯಾಸಾಂಗ ಮಾಡಿದ್ದೇನೆ. ಆ ಸಮಯದಲ್ಲಿ ನನ್ನ ತಂದೆಯವರು ಮೃತಪಟ್ಟಿದ್ದರು. ಬಿ.ಎಸ್.ಸಿ.(ಅಗ್ರಿ) ವ್ಯಾಸಾಂಗ ಮುಗಿಯುವವರೆಗೂ ನನ್ನ ತಂದೆ ನಮ್ಮ ಜೊತೆ ಇದ್ದರು. ನಮ್ಮ ಮನೆಯ ಯಜಮಾನಿಕೆಯನ್ನು ಅವರು ಬದುಕಿರುವವರೆಗೂ ನಡೆಸುತ್ತಿದ್ದರು ಎಂದರೆ ಸರಿ. ಹನುಮಂತಪ್ಪನವರು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ವ್ಯಾಸಾಂಗ ಮಾಡಿದ್ದರು. ಅದು ಸರ್ಕಾರಿ ಕಾಲೇಜಾಗಿತ್ತು ಎಂದರೆ ಸರಿ. ಕಾಲೇಜಿನಲ್ಲಿ ಸರ್ಕಾರಿ ಹಾಸ್ಟೆಲ್ ಸಹ ಇತ್ತು ಎಂದರೆ ಸಾಕ್ಷಿಯು ಅವರು ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದರು ಎಂದು ನುಡಿಯುತ್ತಾರೆ.
2. ಹನುಮಂತಪ್ಪನವರು ನಮ್ಮ ಮನೆಯಲ್ಲಿ ಎಂದಿಗೂ ಇರಲಿಲ್ಲ, ಅವರಿಗೆ ಸರ್ಕಾರಿ ಹಾಸ್ಟೆಲ್ ಉಚಿತವಾಗಿ ದೊರೆಕಿದ್ದ ಕಾರಣ ಸದರಿಯವರು ಹಾಸ್ಟೆಲ್ ನಲ್ಲಿಯೇ ಉಳಿದುಕೊಂಡು ವ್ಯಾಸಾಂಗ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆಯಿಂದಾಗಲೀ ಅಥವಾ ಹನುಮಂತಪ್ಪನವರ ಕುಟುಂಬಕ್ಕಾಗಲೀ ವೈವಾಹಿಕ ಸಂಬಂಧಗಳನ್ನು ಮಾಡಿಕೊಂಡಿಲ್ಲ, ಆದರೆ ಅವರು ನಮಗೆ ಸಂಬಂಧಿಕರಾಗಬೇಕು. ನಾವು ಕುಲದಲ್ಲಿ ಕಂಬಳಿ ಕುಲದವರು, ಹನುಮಂತಪ್ಪನವರ ಕುಟುಂಬದವರು ಒಳಕಲ್ಲು ಕುಟುಂಬದವರು. ನನ್ನ ಮಾವ ಪಿ.ಎಂ. ರಂಗನಾಥಪ್ಪನವರ ತಂದೆಯ ಹೆಸರು ಮುದ್ದಣ್ಣ, ಅವರ ತಾತ ಪುನಾರಂಗಪ್ಪ ಎಂದರೆ ಸರಿ. ನಮ್ಮ ತಾತನ ತಂದೆ ಗೊತ್ತಿಲ್ಲ.
3. ವಾದಿಯರ ತಾತನ ಹೆಸರು ಮುದ್ದಪ್ಪ. ನನ್ನ ಮಾವ ರಂಗನಾಥಪ್ಪನವರದ್ದು ಮೂಲ ಸ್ಥಳ ಕಾಮಗೊಂಡನಹಳ್ಳಿ ಎಂದರೆ ಸರಿ. ವಾದಿಯರ ತಂದೆಯವರ ಮೂಲ ಸ್ಥಳ ಗುಂಡಪ್ಪಚಿಕ್ಕೇನಹಳ್ಳಿ ಎಂದರೆ ಸರಿ, ಮುಂದುವರೆದು ಮೂಲ ಸ್ಥಳ ಗುಂಡಪ್ಪಚಿಕ್ಕೇನಹಳ್ಳಿಯಾದರೂ ಸಹ ಅವರು ವಾಸವಿದದ್ದು ಕಾಮಗೊಂಡನಹಳ್ಳಿಯಲ್ಲಿ ಎಂದು

ನುಡಿಯುತ್ತಾರೆ. ರಂಗನಾಥಪ್ಪನವರಿಗೂ ಮತ್ತು ರಾಮಕೃಷ್ಣಪ್ಪನವರ ಕುಟುಂಬಕ್ಕೂ ಯಾವುದೇ ದಾಯಾದಿಯ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ.

4. 1978 ರಲ್ಲಿ ನಮ್ಮ ತಂದೆಯವರೇ ಮನೆಯ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಮನೆಯ ವ್ಯವಹಾರವನ್ನು ಅವರು ನೋಡಿಕೊಳ್ಳುತ್ತಿದ್ದರು, ಬ್ಯುಸಿನೆಸ್ ನ್ನು ನಾನು ನೋಡಿಕೊಳ್ಳುತ್ತಿದ್ದೆನು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಯಾವುದೇ ಬ್ಯುಸಿನೆಸ್ ನ್ನು ನೋಡಿಕೊಳ್ಳುತ್ತಿರಲಿಲ್ಲ, ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆನು ಎಂದರೆ ಸಾಕ್ಷಿಯು 1976 ರ ನಂತರ ನನ್ನ ವಿದ್ಯಾಭ್ಯಾಸ ಮುಕ್ತಾಯಗೊಂಡಿದ್ದು, ನಾನು ಶಿರಾಗೆ ಬಂದು ವ್ಯವಸಾಯ ಮತ್ತು ಬ್ಯುಸಿನೆಸ್ ಮಾಡುತ್ತಿದ್ದೆನು ಎಂದು ನುಡಿಯುತ್ತಾರೆ. ನಾನು ಮುಂದುವರೆದು ಎಲ್.ಎಲ್.ಬಿ. ಮಾಡುತ್ತಿದ್ದ ಕಾರಣ 1976 ರ ನಂತರ ನಾನು ಶಿರಾಗೆ ಬಂದಿದ್ದೇ ಇಲ್ಲ ಎಂದರೆ ಸಾಕ್ಷಿಯು ನಾನು 1977 ರಲ್ಲಿ ಎಲ್.ಎಲ್.ಬಿ. ಸೇರಿ ಮಧ್ಯೆ ವ್ಯಾಸಾಂಗವನ್ನು ಅರ್ಧಕ್ಕೆ ನಿಲ್ಲಿಸಿದ್ದು ಮತ್ತೆ 1980 ರಲ್ಲಿ ಎಲ್.ಎಲ್.ಬಿ. ಗೆ ಸೇರ್ಪಡೆಯಾಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಎಲ್.ಎಲ್.ಬಿ. ಯನ್ನು ಸಂಪೂರ್ಣವಾಗಿ ವ್ಯಾಸಾಂಗವನ್ನು ಬೆಂಗಳೂರಿನಲ್ಲಿಯೇ ಮಾಡುತ್ತಿದ್ದರೂ ಸಹ ಕೇಸಿಗಾಗಿ ವ್ಯಾಸಾಂಗವನ್ನು ಅರ್ಧಕ್ಕೆ ನಿಲ್ಲಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ತಂದೆಯವರು ಖರೀದಿ ಮಾಡಿದ ಸ್ವತ್ತನ್ನು ಅವರ ಹೆಸರಿನಲ್ಲಿ ಹೆಚ್ಚು ಜಮೀನು ಇರುವ ಕಾರಣ ನನ್ನ ಹೆಸರಿಗೆ ಮಾಡಿಸಿದ್ದರು ಎಂದರೆ ಸರಿಯಲ್ಲ. ನಾನು ಸ್ವಂತ ದುಡಿಮೆಯಿಂದ ಜಮೀನು ಖರೀದಿ ಮಾಡಿದ್ದೇನೆ ಎಂದು ಹೇಳಿದ್ದು, ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ಹನುಮಾನ್ ಟ್ರಾನ್ಸ್ ಪೋರ್ಟ್ ನ್ನು ನಾನು ಪಾರ್ಟ್ನರ್ ಆಗಿದ್ದು, ಅದರ ಆದಾಯದಿಂದ ನಾನು ಜಮೀನು ಖರೀದಿ ಮಾಡಿದ್ದೆನು ಎಂದು ನುಡಿಯುತ್ತಾರೆ. ನಾನು ಎಲ್.ಎಲ್.ಬಿ. ವಿದ್ಯಾಭ್ಯಾಸವನ್ನು ಮಾಡಿದ ನಂತರ ಮಾತ್ರ ನಾನು ಪಾರ್ಟ್ನರ್ ಶಿಪ್ ಗೆ ಬಂದಿದ್ದೆನು ಎಂದರೆ ಸಾಕ್ಷಿಯು ನಾನು ನೋಡಿಕೊಳ್ಳುತ್ತಿದ್ದೆನು, ಆದರೆ 1983 ರ ನಂತರವೇ ನಾನು ಪಾರ್ಟ್ನರ್ ಶಿಫ್ ಪಡೆದಿದ್ದೆನು ಎಂದು ನುಡಿಯುತ್ತಾರೆ.

6. ನಾನು ಸ್ವಂತವಾಗಿ ವ್ಯವಹಾರವನ್ನು ನೋಡಿಕೊಳ್ಳುತ್ತಿರಲಿಲ್ಲ, ಕೇವಲ ನನ್ನ ತಂದೆಗೆ ಮಾತ್ರ ಸಹಾಯಕನಾಗಿದ್ದೆನು ಎಂದರೆ ಸರಿಯಲ್ಲ. ಇತ್ತೀಚೆಗೆ ನಾನು ಮತ್ತು ನನ್ನ ತಮ್ಮ ಮಾಲೀ ಪ್ರಕಾಶ್ ರವರು ಸರ್ವೆ ನಂ. 51 ರ ಜಮೀನನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿಯು 1990-91 ರಲ್ಲಿ ವಿಭಾಗ ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ನಾನು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ರಾಮಕೃಷ್ಣಪ್ಪನವರು ಹೇಗೆ ವ್ಯವಹಾರ ಮಾಡುತ್ತಿದ್ದರು ಮತ್ತು ಹಣವನ್ನು ಹೇಗೆ ಸಂಪಾದಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದ ಸರ್ವೆ ನಂ. 51 ರ ಜಮೀನನ್ನು ನಾನು ಮತ್ತು ರಾಮಕೃಷ್ಣಪ್ಪ ಒಂದೇ ದಿನ ಖರೀದಿ ಮಾಡಿದ್ದ ಕಾರಣ ನನಗೆ ವಿಚಾರ ಗೊತ್ತು ಎಂದು ನುಡಿಯುತ್ತಾರೆ.

7. ರಾಮಕೃಷ್ಣಪ್ಪನವರ ಅತ್ತೆ ಲಕ್ಷ್ಮಮ್ಮನವರಿಗೆ ಎಮ್ಮದೊರೆ ಗ್ರಾಮದಲ್ಲಿ ಸರ್ವೆ ನಂ. 135/2 ರಲ್ಲಿ 8 ಎಕರೆ 14 ಗುಂಟೆ ಹಾಗೂ ಸರ್ವೆ ನಂ. 452 ರಲ್ಲಿ 5 ಎಕರೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಲಕ್ಷ್ಮಮ್ಮನವರು ಮಾಡುತ್ತಿರುವ ವ್ಯವಹಾರ ಮತ್ತು ಅವರು ಹೇಗೆ ಮನೆಯನ್ನು ನಡೆಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅವರು ಗೃಹಿಣಿಯಾಗಿದ್ದರು ಎಂದು ನುಡಿಯುತ್ತಾರೆ. ಲಕ್ಷ್ಮಮ್ಮನವರ ಗಂಡ ತೀರಿಕೊಂಡ ಕಾರಣ ಮನೆಯ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಅವರ ಅಳಿಯ ಕೆ.ಎಂ.ರಾಮಕೃಷ್ಣಪ್ಪನವರೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ರಘುನಂದನ್ ರವರ ಮಾತು ಕೇಳಿ ಅವರಿಗೆ ಪ್ರತ್ಯೇಕವಾದ ಆಸ್ತಿ ಜಮೀನು ಎಲ್ಲಾ ಇದ್ದರೂ ಸಹ ಲಕ್ಷ್ಮಮ್ಮನವರಿಗೆ ಆಸ್ತಿ ಮತ್ತು ಯಾವುದೇ ಆದಾಯ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಸಾಕಷ್ಟು ಆದಾಯ ಇರುವ ಕಾರಣದಿಂದಲೇ ಅವರ ಮಗನಿಗೆ ಮೆಡಿಕಲ್ ವಿದ್ಯಾಭ್ಯಾಸ ಕೊಡಿಸಿದ್ದರು ಎಂದರೆ ಸರಿಯಲ್ಲ. ಅವರ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಸಂಬಂಧವಿಲ್ಲದೇ ಇದ್ದರೂ ಸಹ ರಘುನಂದನ್ ರವರ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಲಕ್ಷ್ಮಮ್ಮನವರ ಕುಟುಂಬದಲ್ಲಿ 1978 ನೇ ಸಾಲಿನಲ್ಲಿ ಬಿ.ಎ. ಪದವಿಯನ್ನು ಮಾಡಿದಂತಹ ಏಕೈಕ ಮಹಿಳೆ ವಾದಿಯಾಗಿದ್ದರು ಎಂದರೆ ಸರಿ. ಆ ಪ್ರೀತಿಗಾಗಿ ಲಕ್ಷ್ಮಮ್ಮನವರು ಅವರು ಕೂಡಿಟ್ಟುಕೊಂಡ ದುಡ್ಡಿನಲ್ಲಿ ರೂ. 10,000/- ರೂಪಾಯಿಗಳ ಹಣವನ್ನು ರೇಣುಕಾದೇವಿಗೆ ಉಡುಗೊರೆಯಾಗಿ ಕೊಟ್ಟು ಒಡವೆಯನ್ನಾದರೂ ತೆಗೆದುಕೋ ಅಥವಾ ಜಮೀನನ್ನಾದರೂ

ತೆಗೆದುಕೋ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಅದೇ ದುಡ್ಡಿನಲ್ಲಿ ವಾದಿಯ ಹೆಸರಿನಲ್ಲಿ ರಾಮಕೃಷ್ಣಪ್ಪನವರು ವಾದಿಗೆ ಸರ್ವೆ ನಂ. 51 ರ ಆಸ್ತಿಯನ್ನು ಕೊಡಿಸಿದ್ದರು ಎಂದರೆ ಸರಿಯಲ್ಲ. ಅಂದಿನಿಂದಲೂ ಸಹ ವಾದಿಯೇ ಸದರಿ ಆಸ್ತಿಯ ಸಂಪೂರ್ಣ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

9. ಸರ್ವೆ ನಂ. 51 ರ ಜಮೀನು ಪೋಡಾಗಿ ವಾದಿಯ ಜಮೀನು ಸರ್ವೆ ನಂ. 51/1(ಎ)3 ಆಗಿದ್ದು, ನಮ್ಮ ಜಮೀನು 51/1(ಎ)2 ಆಗಿದೆ ಎಂದರೆ ಸರಿ. ಸದರಿ ಪೋಡು ಸರಿಯಾಗಿ ಆಗಿಲ್ಲ ಎಂದು ವಾದಿಯ ವಿರುದ್ಧ ಡಿ.ಡಿ.ಎಲ್.ಆರ್. ನ್ಯಾಯಾಲಯಕ್ಕೆ ಕೇಸು ಹಾಕಿದ್ದೆನು ಎಂದರೆ ಸರಿ. ಅದೇ ವಿಚಾರವಾಗಿ ನನಗೂ ವಾದಿಗೂ ಮೊದಲಿನಿಂದಲೂ ತಕರಾರು ಇತ್ತು ಎಂದರೆ ಸಾಕ್ಷಿಯು ನಾನು ರತ್ನಮ್ಮನವರ ಮೇಲೆ ಕೇಸು ಹಾಕಿದ್ದು, ವಾದಿ ಅದರಲ್ಲಿ ಪಕ್ಷಗಾರರು ಎಂದು ನುಡಿಯುತ್ತಾರೆ. ನಾನು ಇತ್ತೀಚೆಗೆ ನಮ್ಮ ಜಮೀನನ್ನು ಕಾಂಪೌಂಡ್ ಹಾಕುವ ಸಮಯದಲ್ಲಿ ವಾದಿಯ ಜಮೀನನ್ನು ಒತ್ತುವರಿ ಮಾಡುವ ಪ್ರಯತ್ನವನ್ನು ಮಾಡಿದ್ದೆನು ಎಂದರೆ ಸರಿಯಲ್ಲ. ವಾದಿಯು ನನ್ನ ವಿರುದ್ಧ ಶಿರಾ ನ್ಯಾಯಾಲಯದಲ್ಲಿ ಒ.ಎಸ್.38/2023 ರಂತೆ ಕೇಸು ಹಾಕಿದ್ದಾರೆ ಎಂದರೆ ಸರಿ.

10. **ಸಾಕ್ಷಿಗೆ ಒ.ಎಸ್.38/2023 ರ ಆದೇಶಪುಟವನ್ನು ತೋರಿಸಲಾಗಿ ಅವರು ಅದನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲಾತಿಯನ್ನು ನಿ.ಪಿ. 167** ಎಂದು ಗುರುತಿಸಲಾಯಿತು. ನಾನು ವಾದಿಯ ಆಸ್ತಿಯನ್ನು ಒತ್ತುವರಿ ಮಾಡುವ ಪ್ರಯತ್ನದಿಂದಲೇ ಸದರಿ ದಾವೆಯನ್ನು ಸಲ್ಲಿಸಲಾಗಿತ್ತು ಎಂದರೆ ಸಾಕ್ಷಿಯು ಡೆಪ್ಯುಟಿ ಕಮಿಷನರ್ ರವರು ನನ್ನ ಜಮೀನಿಗೆ ತಾಕಿಕೊಂಡಿರುವ ದರ್ಗಾದ ವಿಚಾರವಾಗಿ ವಿವಾದ ಉಂಟಾದ ಸಮಯದಲ್ಲಿ ಅಳತೆ ಮಾಡಿಸಿ ಸ್ಕೆಚ್ ಮಾಡಿಸಿದ್ದು, ಅದರ ಆಧಾರದ ಮೇಲೆ ಕಾಂಪೌಂಡ್ ಹಾಕಲು ಪ್ರಯತ್ನಿಸಿದ್ದೆನು ಎಂದು ನುಡಿಯುತ್ತಾರೆ. ದರ್ಗಾ ಆಸ್ತಿಯು ಸರ್ವೆ ನಂ. 49 ರಲ್ಲಿ ಇದ್ದು, ನನಗೆ ಸೇರಿದ ಆಸ್ತಿಯು ಸರ್ವೆ ನಂ. 51 ರಲ್ಲಿ ಇದ್ದ ಕಾರಣ ನಮ್ಮ ಆಸ್ತಿಗೂ ದರ್ಗಾ ಆಸ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿಯು ನಮ್ಮ ಪಕ್ಕದ ಜಮೀನು ಎಂದು ನುಡಿಯುತ್ತಾರೆ. ನನಗೂ ಮತ್ತು ವಾದಿಯರಿಗೆ ಪೋಡಿ ವಿಚಾರವಾಗಿ ವಿವಾದವಿದ್ದು, ದರ್ಗಾದ ಜಮೀನಿಗೂ ನಮಗೂ ಯಾವುದೇ ವಿವಾದವಿಲ್ಲ ಎಂದರೆ ಸರಿಯಲ್ಲ.

11. ರಘುನಂದನ್ ರವರು ನನ್ನ ಬಳಿ ಬಂದು ವಾದಿ ಮತ್ತು ನನ್ನ ಮಧ್ಯೆ ಇರುವ ಬೌಂಡರಿ ವಿಚಾರವಾಗಿ ಎಂದಿಗೂ ಕೇಳಿಲ್ಲ ಎಂದರೆ ಸರಿ. ರಘುನಂದನ್ ರವರು ಅವರ ಜಮೀನನ್ನು ನಿಗಾವಣೆ ಮಾಡದಿದ್ದ ಕಾರಣ ಅವರು ಎಂದೂ ನನ್ನನ್ನು ಬಂದು ಕೇಳಿಲ್ಲ ಎಂದರೆ ಸಾಕ್ಷಿಯು ವಾದಿಯು ಕಾನೂನು ಬಾಹಿರವಾಗಿ ಸದರಿ ಜಮೀನಿನಲ್ಲಿ ಅಂಗಡಿಗಳನ್ನು ಕಟ್ಟಿಸಿದ್ದು, ಆ ಬಗ್ಗೆ ರಘುನಂದನ್ ರವರು ದೂರನ್ನು ಕೊಟ್ಟಿದ್ದು, ಇಬ್ಬರೂ ಅಕ್ಕ ತಮ್ಮ ಆಗಿರುವ ಕಾರಣ ಅದನ್ನು ನಾನೇ ರಾಜಿ ಮಾಡಿಕೊಳ್ಳುವಂತೆ ಹೇಳಿದ್ದೆನು ಎಂದು ನುಡಿಯುತ್ತಾರೆ. ನಾನು ಈಗ ಹೇಳಿದ ಘಟನೆ ಇತ್ತೀಚೆಗೆ ಕೇಸು ಹಾಕಿದ ನಂತರ ಆಗಿದೆ ಎಂದರೆ ಸರಿ.

12. ರಾಮಕೃಷ್ಣಪ್ಪ ಮತ್ತು ಲಕ್ಷ್ಮಮ್ಮನವರ ಕುಟುಂಬದ ಬಗ್ಗೆ ಯಾವುದೇ ತಿಳುವಳಿಕೆ ನನಗೆ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಕೃಷ್ಣಪ್ಪನವರು ರೇಣುಕಾದೇವಿಗೆ ಅವರ ಹಣದಿಂದ ಆಸ್ತಿಯನ್ನು ಖರೀದಿ ಮಾಡಿಕೊಟ್ಟಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದು, ಪ್ರತಿವಾದ ಸ್ವತ್ತನ್ನು ವಾದಿಯು ಅವರ ಅಜ್ಜಿಕೊಟ್ಟ ಹಣದಿಂದ ತನ್ನ ಸಹಾಯ ಪಡೆದು ಸ್ವಂತವಾಗಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ರಾಮಕೃಷ್ಣಪ್ಪನವರೇ ಲಕ್ಷ್ಮಮ್ಮನವರ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೂ ನನಗೂ ವಿವಾದ ಇರುವ ಕಾರಣ ವಾದಿಯ ಮೇಲಿನ ದ್ವೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**